ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆ ಇಲಾಖೆ)

ಸಂಖ್ಯೆ: ಕೆಜಿಎಸ್‌ಟಿ/ಸಿಆರ್/15/18-19

ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಛೇರಿ,
ವಾಣಿಜ್ಯ ತೆರಿಗೆಗಳ ಕಾರ್ಯಾಲಯ,
ಗಾಂಧಿನಗರ, ಬೆಂಗಳೂರು – 560 009,
ದಿನಾಂಕ: 13-08-2018.

## ಪತ್ರಿಕಾ ಪ್ರಕಟಣೆ

ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 05.07.2018ರಂದು ಮಾಡಿದ 2018-19ನೇ ಸಾಲಿನ ಆಯವ್ಯಯದ ಭಾಷಣದಲ್ಲಿ, ಬಾಕಿ ಇರುವ ಕೇಂದ್ರ ಮಾರಾಟ ತೆರಿಗೆಯನ್ನು ಕಡಿಮೆಗೊಳಿಸಲು ಕರಸಮಾಧಾನ ಯೋಜನೆಯೊಂದನ್ನು ಜಾರಿಗೆ ತರುವುದಾಗಿ ಘೋಷಣೆ ಮಾಡಿದ್ದರು. ಅದರಂತೆ ರಾಜ್ಯ ಸರ್ಕಾರವು "ಸಿಎಸ್‌ಟಿ ಕರಸಮಾಧಾನ ಯೋಜನೆ, 2018"ನ್ನು ಜಾರಿಗೆ ತರಲು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 38 ಸಿಎಸ್‌ಎಲ್ 2018 ದಿನಾಂಕ: 04.08.2018 ಹೊರಡಿಸಿದೆ.

ಸದರಿ ಯೋಜನೆಯ ಮುಖ್ಯಾಂಶಗಳು ಈ ಕೆಳಕಂಡಂತಿವೆ.

- 1956ರ ಕೇಂದ್ರ ಮಾರಾಟ ತೆರಿಗೆ ಕಾಯ್ದೆಯಡಿಯಲ್ಲಿ ದಿನಾಂಕ: 30.06.2018ರೊಳಗೆ ಪೂರ್ಣಗೊಳಿಸಲಾದ ಕರನಿರ್ಧರಣೆ / ಮರುಕರನಿರ್ಧರಣೆಗೆ ಸಂಬಂಧಿಸಿದಂತೆ ಬಾಕಿ ಇರುವ ದಂಡ ಮತ್ತು ಬಡ್ಡಿಯ ಶೇಕಡ 100 ರಷ್ಟನ್ನು ಮನ್ನಾ ಮಾಡಲಾಗುವುದು.
- ಕೇಂದ್ರ ಮಾರಾಟ ತೆರಿಗೆ ಕಾಯ್ದೆಯಡಿಯಲ್ಲಿ ಬಾಕಿ ಇರುವ ಪೂರ್ಣ ತೆರಿಗೆ ಮೊತ್ತವನ್ನು ದಿನಾಂಕ: 30.10.2018ರೊಳಗಾಗಿ ಪಾವತಿಸತಕ್ಕದ್ದು.
- ಈ ಯೋಜನೆಯು ತೆರಿಗೆ ಬಾಕಿ ಇಲ್ಲದ ಆದರೆ ಬಡ್ಡಿ ಮತ್ತು ದಂಡ ಬಾಕಿ ಇರುವ ವರ್ತಕರಿಗೂ ಅನ್ವಯವಾಗುತ್ತದೆ. ಇಂತಹ ಪ್ರಕರಣಗಳಲ್ಲೂ ಶೇ 100 ರಷ್ಟು ಬಡ್ಡಿ ಮತ್ತು ದಂಡ ಮನ್ನಾ ಮಾಡಲಾಗುವುದು.
- ತೆರಿಗೆ ಬಾಕಿ ಹಾಗೂ / ದಂಡ ಮತ್ತು ಬಡ್ಡಿ ಬಾಕಿಗೆ ಸಂಬಂಧಿಸಿದ ಆದೇಶ ಅಥವಾ ನಡವಳಿಗಳ ವಿರುದ್ಧ ಯಾವುದೇ ಮನವಿ ಪ್ರಾಧಿಕಾರ ಅಥವಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು, ಅಂತಹ ಅರ್ಜಿಯು ವಿಲೇವಾರಿಯಾಗದೆ ಬಾಕಿ ಉಳಿದಿದ್ದಲ್ಲಿ ಅಂತಹ ವ್ಯಾಪಾರಿ ಈ ಸೌಲಭ್ಯವನ್ನು ಪಡೆಯುವ ಮೊದಲು ಮೇಲ್ಮನವಿ ಅಥವಾ ಅರ್ಜಿಯನ್ನು ಹಿಂಪಡೆಯತಕ್ಕದ್ದು.
- ಮೇಲ್ಮನವಿ ಅಥವಾ ಇತರೆ ಅರ್ಜಿಯನ್ನು ಸಲ್ಲಿಸುವಾಗ ಪಾವತಿ ಮಾಡಿದ್ದ ದಂಡ ಹಾಗೂ / ಬಡ್ಡಿ ಮೊತ್ತವು ತೆರಿಗೆ ಬಾಕಿಗೆ ಹೊಂದಾವಣಿಕೆಗೆ ಅರ್ಹವಿರುತ್ತದೆ.
- ಈ ಯೋಜನೆಯ ಸೌಲಭ್ಯವನ್ನು ಪಡೆಯಲು ಇಚ್ಛಿಸುವ ವ್ಯಾಪಾರಿಯು ಪ್ರತಿವರ್ಷಕ್ಕೂ ಪ್ರತ್ಯೇಕವಾಗಿ ಅರ್ಜಿಯನ್ನು ವಿದ್ಯುನ್ಮಾನ ವಿಧಾನದಲ್ಲಿ ದಿನಾಂಕ: 30-10-2018ರ ಒಳಗಾಗಿ http://ctax.kar.nic.in ಅಥವಾ http://gst.kar.nic.in ಜಾಲತಾಣಗಳಲ್ಲಿ ಸಲ್ಲಿಸಬೇಕು.
- ಸಿಎಸ್‌ಟಿ ಕರಸಮಾಧಾನ ಯೋಜನೆ, 2018ರಡಿಯಲ್ಲಿ ವಿದ್ಯುನ್ಮಾನ ವಿಧಾನದಲ್ಲಿ ಅರ್ಜಿ ಸಲ್ಲಿಸಲು ಬಳಕೆದಾರರ ಕೈಪಿಡಿ (User manual for filing of application electronically under CST Karasamadhana Scheme, 2018) ಯನ್ನು ಮೇಲಿನ ಎರಡು ಜಾಲತಾಣಗಳಲ್ಲಿ ಅಳವಡಿಸಲಾಗಿದೆ.

ಅರ್ಹ ವರ್ತಕರು ಸಿಎಸ್‌ಟಿ ಕರಸಮಾಧಾನ ಯೋಜನೆಯ ಅವಕಾಶವನ್ನು ಬಳಸಿಕೊಳ್ಳಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಕರನಿರ್ಧರಣೆ ಅಧಿಕಾರಿಗಳನ್ನು ಅಥವಾ ಸಹಾಯವಾಣಿಯ ಶುಲ್ಕರಹಿತ ದೂರವಾಣಿ **1800-425-6300** ಸಂಪರ್ಕಿಸಿ.

(ಎಂ.ಎಸ್. ಶ್ರೀಕರ್)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ) ಬೆಂಗಳೂರು